ಶ್ರೀ. ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ;

''1995ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು.

ಶ್ರೀ. ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.(ಅನುಬಂಧ I)

2. ಕರ್ನಾಟಕ ಸ್ಟ್ಯಾಂಪುಗಳ (ಎರಡನೇ ತಿದ್ದುಪಡಿ) ವಿಧೇಯಕ, 1995 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ 1995ರ ಕರ್ನಾಟಕ ಸ್ಟ್ಯಾಂಪುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

''1995ರ ಕರ್ನಾಟಕ ಸ್ಟ್ಯಾಂಪುಗಳ(ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು

ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಸ್ಟ್ಯಾಂಪುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿದೇಯಕವನ್ನು ಮಂಡಿಸಲಾಗಿದೆ. ಅನುಬಂಧ- II

3. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ 1995 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಜಿ ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ;

''1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳು) : 1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-III

(ಸಭೆಯನ್ನು ಒಂದು ಘಂಟೆಯ ಕಾಲ ಮುಂದೂಡಲಾಗಿದೆ)

(ಸಭೆ ಪುನಃ 4-10 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು ಉಪಸ್ಥಿತರಿದ್ದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಆರೋಗ್ಯ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು.

ಅಧ್ಯಕ್ಷರು : ಆರೋಗ್ಯ ಸಚಿವರು ಮೇಲ್ಮನೆಗೆ ಹೋಗಿದ್ದಾರೆ. ಅವರು ಬಂದು ಇಷ್ಟು ಹೊತ್ತು ಇಲ್ಲಿ ಇದ್ದರು. ಅವರು ಅಲ್ಲಿಂದ ಬಂದ ಮೇಲೆ ಇಲ್ಲಿ ಉತ್ತರ ಕೊಡುತ್ತಾರೆ.

ಶಾಸನಗಳ ರಚನೆ

1. ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕ 1995

ವಿದೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಶ್ರೀಮತಿ ಬಿ.ಟಿ. ಲಲಿತಾನಾಯಕ್: (ಕನ್ನಡ ಮತ್ತು ಸಂಸ್ಕೃತಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ರಾಜ್ಯಮಂತ್ರಿ): ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

* ಶ್ರೀಮತಿ ಬಿ.ಟಿ.ಲಲಿತಾ ನಾಯಕ್ : ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇವತ್ತು ಮಹಿಳೆಯರ ರಕ್ಷಣೆಗಾಗಿ ಹಲವಾರು ರೀತಿಯ ಕಾನೂನುಗಳು ಇದ್ದು ಎಲ್ಲಾ ರೀತಿಯ ಸಂಘಸಂಸ್ಥೆಗಳು ಕೆಲಸ ಮಾಡುತ್ತಿವೆ. ಬೇಕಾದಷ್ಟು ನಾಯ್ಯಾಲಯಗಳಲ್ಲಿ ಅವಳಿಗೆ ನ್ಯಾಯ ಸಿಗಬೇಕೆಂದು ಇದೆ. ಆದರೆ ಯಾವ ರೀತಿಯಿಂದ ಇಷ್ಟು ಸೌಲಭ್ಯಗಳನ್ನು ಕೊಟ್ಟರೂ ಕೂಡ ನಿಜವಾಗಿಯೂ ಅವಳಿಗೆ ನ್ಯಾಯ ಸಿಗುತ್ತಿಲ್ಲ. ಇದೊಂದೇ ಒಂದು ಕಾರಣಕ್ಕೆ ರಾಜ್ಯ ಮಹಿಳಾ ಆಯೋಗದ ಈ ಅಧಿನಿಯಮವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. ಕೇಂದ್ರದಲ್ಲೂ ಕೂಡ ರಾಷ್ಟ್ರೀಯ ಮಹಿಳಾ ಆಯೋಗವೆಂದು ಹಿಂದೆ ರಚನೆಯಾಗಿದೆ. ಅದರ ಪ್ರಕಾರ ನಮ್ಮ ರಾಜ್ಯದಲ್ಲೂ ಕೂಡ ಒಂದು ಆಯೋಗ ರಚನೆ ಆಗಬೇಕು ಎಂಬ ದೃಷ್ಟಿಯಿಂದ ಲಾ ಸ್ಕೂಲ್ ಅಂತ ಏನಿದೆ ಅದರ ಮುಖಾಂತರ ನಾವು ಕೇಳಿಕೊಂಡಿದ್ದಾಗಿತ್ತು. ಮಹಿಳೆಯರಿಗಾಗಿ ಸರಿಯಾದ ರೀತಿಯ ಆಯೋಗವನ್ನು ರಚನೆ ಮಾಡಿಕೊಡುವ